# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 82 |
| ಸದಸ್ಯರ ಹೆಸರು | : | ಶ್ರೀ ಬಿ.ಎಂ.ಫಾರೂಖ್<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 12-09-2022 |
| ಉತ್ತರಿಸುವ ಸಚಿವರು | : | ಮಾನ್ಯ ಇಂಧನ ಹಾಗೂ ಕನ್ನಡ<br>ಮತ್ತು ಸಂಸ್ಕೃತಿ ಸಚಿವರು |

| | ಪ್ರಶ್ನೆ | ಉತ್ತರ |
|---|---|---|
| ಅ) | ನವೀಕರಿಸಬಹುದಾದ ಇಂಧನದ ಮೂಲಕ ಉತ್ಪಾದಿಸುವ ವಿದ್ಯುತ್ ಅನ್ನು store ಮಾಡುವ ಸಲುವಾಗಿ REMP storage ಯೋಜನೆ ಹಾಗೂ Green ammonia ಘಟಕಗಳನ್ನು ಅನುಷ್ಠಾನಗೊಳಿಸಲು MNRE ಗೈಡ್‌ಲೈನ್ ಪ್ರಕಾರ ಇಂಧನ ಇಲಾಖೆಯ ಕ್ರೆಡಲ್ ಸಂಸ್ಥೆಯ ವ್ಯಾಪ್ತಿಗೆ ಒಳಪಡುತ್ತದೆಯೇ ಅಥವಾ ವಾಣಿಜ್ಯ ಹಾಗೂ ಕೈಗಾರಿಕಾ ಇಲಾಖೆಯ ವ್ಯಾಪ್ತಿಗೆ ಒಳಪಡುತ್ತದೆ ಎಂಬುದರ ಬಗ್ಗೆ ಸ್ಪಷ್ಟ ಮಾಹಿತಿಯನ್ನು ನೀಡುವುದು? | ನವೀಕರಿಸಬಹುದಾದ ಇಂಧನ ನೀತಿ 2022-27 ರಲ್ಲಿ ನವೀಕರಿಸಬಹುದಾದ ಇಂಧನ ಮೂಲಕ ಉತ್ಪಾದಿಸುವ ವಿದ್ಯುತ್ತನ್ನು ಶೇಖರಿಸುವ ಯೋಜನೆಗಳನ್ನು (Pumped Storage, Battery Storage ಮತ್ತು ಇನ್ನಿತರ ಶೇಖರಣೆ ಯೋಜನೆಗಳು) ಸ್ಥಾಪಿಸಲು ಒತ್ತು ನೀಡಲಾಗುತ್ತಿದೆ.<br>ವಿದ್ಯುತ್ ಸ್ಟೋರ್ ಮಾಡುವ ಸಲುವಾಗಿ REMP storage (Pumped Storage) ಯೋಜನೆಗಳು ಇಂಧನ ಇಲಾಖೆಯ ವ್ಯಾಪ್ತಿಗೆ ಬರುತ್ತದೆ.<br>ಮುಂದುವರೆದು, ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆ Green Hydrogen Mission ಗೆ ಕೈಜೋಡಿಸುವ ನಿಟ್ಟಿನಲ್ಲಿ ರಾಜ್ಯಕ್ಕೆ ಅನ್ವಯವಾಗುವಂತೆ ರಾಜ್ಯ ಸರ್ಕಾರದಿಂದ ಪ್ರತ್ಯೇಕ ಗ್ರೀನ್ ಹೈಡ್ರೋಜನ್ ನೀತಿಯನ್ನು ರೂಪಿಸುವ ಕುರಿತು ಹಾಗೂ ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಪ್ರಾಯೋಗಿಕವಾಗಿ ಗ್ರೀನ್ ಹೈಡ್ರೋಜನ್ ಯೋಜನೆಯ ಸಾಧ್ಯಾಸಾಧ್ಯತೆಗಳನ್ನು ಪರಿಶೀಲಿಸಲಾಗುವುದು ಎಂದು ರಾಜ್ಯ ಸರ್ಕಾರದ ಬಜೆಟ್ ಆಯವ್ಯಯ 2022-23 ರಲ್ಲಿ ಘೋಷಿಸಲಾಗಿದೆ.<br>ಕೇಂದ್ರ ಸರ್ಕಾರದ ವಿದ್ಯುತ್ ಸಚಿವಾಲಯದಿಂದ ಹೊರಡಿಸಿರುವ ಗೆಜೆಟ್ ಅಧಿಸೂಚನೆ ದಿನಾಂಕ 6th June 2022 Electricity Act 36 of 2003 (part-II) ರನ್ವಯ Green Hydrogen ಇದನ್ನು ನವೀಕರಿಸಬಹುದಾದ ಮೂಲವೆಂದು ವರ್ಗೀಕರಿಸಲಾಗಿದ್ದು ಕ್ರಮ ಸಂಖ್ಯೆ (6) ರಲ್ಲಿ Green Hydrogen/Green Ammonia ಘಟಕಗಳಿಗೆ ಬೇಕಾಗುವ ನವೀಕರಿಸಬಹುದಾದ ವಿದ್ಯುತ್ತನ್ನು Open Access ವರ್ಗದಡಿಯಲ್ಲಿ ಅನುಮೋದನೆ ನೀಡಲು ಇಂಧನ ಇಲಾಖೆಯ ವ್ಯಾಪ್ತಿಗೆ ಅಧಿಕಾರ ನೀಡಲಾಗಿದೆ (ಅಧಿಸೂಚನೆಯನ್ನು **ಅನುಬಂಧದಲ್ಲಿ** ನೀಡಲಾಗಿದೆ.).<br>ಕೇಂದ್ರ ಸರ್ಕಾರದ ಎಂ.ಎನ್.ಆರ್.ಇ ಇವರಿಂದ Green Hydrogen and Green Ammonia ಗೆ ಸಂಬಂಧಿಸಿದ ಕಾರ್ಯಗಳನ್ನು ನಿರ್ವಹಿಸಲಾಗುತ್ತಿದ್ದು, ಇದಕ್ಕೆ ಸಂಬಂಧಿಸಿದಂತೆ, ಮಾರ್ಗಸೂಚಿಗಳನ್ನು /Guidelines ರೂಪಿಸಲಾಗುತ್ತಿದೆ. MNRE ಇಂದ ಮಾರ್ಗ ಸೂಚಿಗಳನ್ನು ರೂಪಿಸುತ್ತಿರುವುದರಿಂದ, ರಾಜ್ಯದಲ್ಲಿ Green Hydrogen ಮತ್ತು Green Ammonia ಘಟಕಗಳ ಸ್ಥಾಪನೆಯು ಇಂಧನ ಇಲಾಖೆಯ ವ್ಯಾಪ್ತಿಯ ಕ್ರೆಡಲ್ ಗೆ ಒಳಪಡುತ್ತವೆ. |

ಸಂಖ್ಯೆ: ಎನರ್ಜಿ 187 ಇಬಿಎಸ್ 2022

(ವಿ ಸುನಿಲ್ ಕುಮಾರ್)
ಇಂಧನ ಹಾಗೂ ಕನ್ನಡ ಮತ್ತು
ಸಂಸ್ಕೃತಿ ಸಚಿವರು